# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ

**ಸಿ.ಸಿ.ನಂ.2128/2022**

1) ಕರ್ನಾಟಕ ಸರಕಾರ

.....ಫಿರ್ಯಾದಿದಾರ

– ವಿರುದ್ಧ –

2 ನೇ ಆರೋಪಿ : ಬಸವರಾಜ ಸುಭಾಶ ಹರಿಜನ, ಸಾಃ ಉದಗಟ್ಟಿ ಗ್ರಾಮ

......ಆರೋಪಿತರು

**– ಆಪಾದನೆ –**

ನಾನು ಶ್ರೀಮತಿ.ಶುಷ್ಮ ಟಿ.ಸಿ. ಬಿ.ಕಾಂ, ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ದಿನಾಂಕ 22-05-2022 ರಂದು ಮ.02-00 ಗಂಟೆಯ ಸುಮಾರಿಗೆ ಬನಹಟ್ಟಿ ಪೋಲಿಸ ಠಾಣಾ ಹದ್ದಿಯಲ್ಲಿ ಚಿಮ್ಮಡ ಜಗದಾಳ ರಸ್ತೆಯ ಯಲ್ಲಟ್ಟಿಯವರ ಜಮೀನದ ಮೇಲೆ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಮೊಟಾರ್ ಸೈಕಲ್ ನಂ. ಕೆ ಎ 48/ಎಸ್ - 1137 ನೇದ್ದರ ಅಧಿಕೃತ ಚಾಲನಾ ಪತ್ರವನ್ನು ಹೊಂದದೇ ಚಿಮ್ಮಡ ಕೆರೆ ರೋಡ ಕಡೆಯಿಂದ ಜಗದಾಳ ಕಡೆಗೆ ಅತೀ ಜೋರಾಗಿ ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿ ಅಪಘಾತ ಪಡಿಸಿ ಪಿರ್ಯಾದಿಗೆ ಬಲಗಡೆ ಕಪಾಳಕ್ಕೆ, ಎಡಗೈಗೆ ತೆರಚಿದ ಗಾಯ ಮತ್ತು ಅಶ್ವಿನಿ ನಡುವಿನಮನಿ ಇವರ ಎಡಗಡೆ ಹಣೆಗೆ ಕಪಾಳಕ್ಕೆ ಮತ್ತು ಕೈ ಬೆರಳುಗಳಿಗೆ ಸಾದಾ ಗಾಯ ಪಡಿಸಿ ನೀವೂ ಸಹ ಸಾದಾ ಮತ್ತು ಭಾರಿ ಗಾಯ ಹೊಂದಿದ ಅಪರಾಧ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.279, 337, 338 ಮತ್ತು ಮೋಟಾರ ವಾಹನ ಕಾಯ್ದೆ ಕಲಂ.3 ರೆ/ವು 181 ರ ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ-

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ-

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ಸ್ಥಳಃ ಬನಹಟ್ಟಿ
ದಿನಾಂಕ : 11-02-2023

ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ.